ಬಂಗಾಳಕೊಲ್ಲಿಯಲ್ಲಿ ದತ್ತಾಂಶ ಸಂಗ್ರಹಿಸುತ್ತಿದ್ದ ಚೀನಾ ನೌಕೆಯನ್ನು ಭಾರತೀಯ ನೌಕಾಪಡೆಯ ಹಡಗೊಂದು ಪತ್ತೆಹಚ್ಚಿ ಹಿಮ್ಮೆಟ್ಟಿಸಿದ್ದು ತೀರಾ ಈಚೆಗೆ ನಡೆದ ಬೆಳವಣಿಗೆ. ತುಸು ಹಿಂದಕ್ಕೆ ಹೋದರೆ ಭೂತಾನ್ ಗಡಿಯಲ್ಲಿ ಎರಡೂ ದೇಶಗಳ ಸೈನಿಕರು ಎದೆಸೆಟೆಸಿ ನಿಂತ ‘ಡೊಕ್ಲಾಮ್ ಉದ್ವಿಗ್ನತೆ’ ನೆನಪಾದೀತು. ಈ ಉದ್ವಿಗ್ನತೆ ನಿರ್ವಹಿಸಿದ್ದವರೂ ಇದೇ ನರವಾಣೆ.

ಭೂಸೇನೆಯ ಮುಖ್ಯಸ್ಥರಾಗಿ ನರವಾಣೆ ನೇಮಕ ಭಾರತೀಯ ಸಶಸ್ತ್ರ ಪಡೆಗಳ ಇತಿಹಾಸದಲ್ಲಿ ಮತ್ತೊಂದು ಮಹತ್ವದ ಬೆಳವಣಿಗೆಗೂ ಕಾರಣವಾಗಿದೆ. ವಾಯುಪಡೆಯ ಮುಖ್ಯಸ್ಥರಾಗಿರುವ ಏರ್‌ಚೀಫ್ ಮಾರ್ಷಲ್ ಆರ್.ಕೆ.ಎಸ್. ಬಧೌರಿಯಾ ಮತ್ತು ನೌಕಾಪಡೆ ಮುಖ್ಯಸ್ಥರಾಗಿರುವ ಅಡ್ಮಿರಲ್ ಕರಮ್‌ಬೀರ್ ಸಿಂಗ್ ಪರಸ್ಪರ ಉತ್ತಮ ಸ್ನೇಹಿತರು. ಮೂವರೂ ವೃತ್ತಿಬದುಕಿನ ಏಣಿಯ ಮೆಟ್ಟಿಲುಗಳನ್ನು ಒಂದೇ ರೀತಿ ಏರಿದವರು.

## ವಾಯುಪಡೆಯ ನಂಟು

ಮೂರೂ ಸಶಸ್ತ್ರಪಡೆ ಮುಖ್ಯಸ್ಥರ ಬಾಲ್ಯ ವಾಯುಪಡೆಯೊಂದಿಗೆ ಬೆಸೆದುಕೊಂಡಿದೆ. ಜನರಲ್ ನರವಾಣೆ ಮತ್ತು ಅಡ್ಮಿರಲ್ ಕರಮ್‌ಬೀರ್ ಅವರ ಅಪ್ಪಂದಿರು ವಾಯುಪಡೆಯಲ್ಲಿ ಸೇವೆ ಸಲ್ಲಿಸಿದ್ದವರು. ಮಾತ್ರವಲ್ಲ, ಉತ್ತಮ ಸ್ನೇಹಿತರಾಗಿದ್ದವರು. ಇದೇ ಕಾರಣದಿಂದ ನರವಾಣೆ ಮತ್ತು ಕರಮ್‌ಬೀರ್ ಸಶಸ್ತ್ರಪಡೆಗಳಲ್ಲಿ ವೃತ್ತಿ ಆರಂಭಿಸುವ ಮೊದಲಿನಿಂದಲೂ ಪರಸ್ಪರ ಉತ್ತಮ ಸ್ನೇಹಿತರಾಗಿದ್ದರು. ವಾಯುಪಡೆ ಮುಖ್ಯಸ್ಥರಾಗಿರುವ ಏರ್ ಚೀಫ್ ಮಾರ್ಷಲ್ ಆರ್.ಕೆ.ಎಸ್. ಬಧೌರಿಯಾ ಅವರ ತಂದೆಯೂ ವಾಯುಪಡೆಯಲ್ಲಿ ಫ್ಲಾಗ್ ಆಫೀಸರ್ ಆಗಿ ನಿವೃತ್ತರಾದವರು.

## ಸಹಪಾಠಿಗಳು

ಜನರಲ್ ನರವಾಣೆ, ಅಡ್ಮಿರಲ್ ಕರಮ್‌ಬೀರ್ ಸಿಂಗ್ ಮತ್ತು ಏರ್ ಚೀಫ್ ಮಾರ್ಷಲ್ ಆರ್.ಕೆ.ಎಸ್. ಬಧೌರಿಯಾ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ (ಎನ್‌ಡಿಎ) 56ನೇ ಬ್ಯಾಚ್‌ಗೆ ಸೇರಿದವರು. ಮೂವರೂ ಸಶಸ್ತ್ರ ಪಡೆಗಳಿಗೆ ಅಧಿಕಾರಿಗಳಾಗಿ ಸೇವೆಯ ಆದೇಶ ಸಿಕ್ಕಿದ್ದು 1980ರ ಜೂನ್–ಜುಲೈ ಅವಧಿಯಲ್ಲಿ.

## ಸಮವಸ್ತ್ರದ ಮೇಲೆ ರೆಕ್ಕೆಗಳು

ಅಡ್ಮಿರಲ್ ಕರಮ್‌ಬೀರ್ ಸಿಂಗ್ ಅವರ ಸಮವಸ್ತ್ರದ ಮೇಲೆ ಹೆಲಿಕಾಪ್ಟರ್ ಪೈಲಟ್‌ಗಳು ಧರಿಸುವ ರೆಕ್ಕೆಗಳಿವೆ, ಏರ್ ಚೀಫ್ ಮಾರ್ಷಲ್ ಬಧೌರಿಯಾ ಸಮವಸ್ತ್ರದ ಮೇಲೆ ಫೈಟರ್ ಪೈಲಟ್ ಧರಿಸುವ ರೆಕ್ಕೆಗಳಿವೆ. ಜನರಲ್ ನರವಾಣೆ ಅವರ ಸಮವಸ್ತ್ರದಲ್ಲಿ ಪ್ಯಾರಾಟ್ರೂಪರ್‌ಗಳ ರೆಕ್ಕೆಗಳಿವೆ.

## ಗೆಳೆತನದಿಂದ ಅನುಕೂಲ

ಸಹಪಾಠಿಗಳು ಮತ್ತು ಪರಸ್ಪರ ಉತ್ತಮ ಸಂಬಂಧ ಹೊಂದಿರುವ ಈ ಮೂವರೂ ಸಶಸ್ತ್ರ ಪಡೆಗಳ ಮುಖ್ಯಸ್ಥರ ನಡುವೆ ಹೊಂದಾಣಿಕೆಯೂ ಚೆನ್ನಾಗಿದೆ. ಇದು ಮೂರೂ ಪಡೆಗಳು ಸಹಯೋಗದಿಂದ ಕಾರ್ಯನಿರ್ವಹಿಸುವುದು ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಸುಲಭಗೊಳಿಸುತ್ತದೆ. ರಕ್ಷಣಾ ಪಡೆಗಳ ಮುಖ್ಯಸ್ಥರ (ಸಿಡಿಎಸ್– ಚೀಫ್ ಆಫ್ ಡಿಫೆನ್ಸ್ ಸ್ಟಾಫ್) ಹುದ್ದೆಯನ್ನು ಹೊಸದಾಗಿ ರೂಪಿಸಿರುವ ಸರ್ಕಾರ ಸಶಸ್ತ್ರ ಪಡೆಗಳ ಕಾರ್ಯನಿರ್ವಹಣೆಯಲ್ಲಿ ಮಹತ್ವದ ಬದಲಾವಣೆ ತರಲು ಮುಂದಾಗಿರುವ ಈ ಹೊತ್ತಿನಲ್ಲಿ ಸಹಪಾಠಿಗಳೇ ಸಮಾನ ಸ್ತರದ ಸಹೋದ್ಯೋಗಿಗಳೂ ಆಗಿರುವ ಅಪರೂಪದ ಬೆಳವಣಿಗೆಯೂ ಒದಗಿ ಬಂದಿದೆ. ■



ಏರ್ ಚೀಫ್ ಮಾರ್ಷಲ್
ಆರ್.ಕೆ.ಎಸ್.ಬಧೌರಿಯಾ


